ನಂಜಪ್ಪ ಲೈಫ್ ಕೇರ್
ಶಿವಮೊಗ್ಗ

# ಬಯಾಪ್ಸಿ ಮಾಡಿದರೆ ಕ್ಯಾನ್ಸರ್ ಹೆಚ್ಚಾಗುತ್ತಾ? ಇಲ್ಲಿದೆ ಅಸಲಿ ಸತ್ಯ ಮತ್ತು ತಜ್ಞರ ಮಾಹಿತಿ..!

ನಂಜಪ್ಪ ಹಾಸ್ಪಿಟಲ್ಸ್
ದಾವಣಗೆರೆ

ಭಾಗ 3

## ಕ್ಯಾನ್ಸರ್ ಜಾಗೃತಿ ಸರಣಿ

**“ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿದರೆ, ಗುಣಪಡಿಸುವ ಸಾಧ್ಯತೆ ಹೆಚ್ಚು”**


**ಕ್ಯಾನ್ಸರ್ ಕುರಿತು ಸಾರ್ಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅನುಭವಿ ತಜ್ಞರ ಸಲಹೆ ಮತ್ತು ಮಹತ್ವದ ಮಾಹಿತಿಗಳನ್ನು ಒಳಗೊಂಡ ಲೇಖನಗಳು**

### ಬಯಾಪ್ಸಿ ಮಾಡಿದರೆ ಕ್ಯಾನ್ಸರ್ ಹೆಚ್ಚುತ್ತದೆಯೇ?

ಜನರಲ್ಲಿ ವರ್ಷಗಳಿಂದ ಇರುವ ಒಂದು ಭಯದ ಹಿಂದೆ ಇರುವ ನಿಜವಾದ ವಿಜ್ಞಾನ.“ಸೂಜಿ ಪರೀಕ್ಷೆ ಮಾಡಿದ ಮೇಲೆ ಗಡ್ಡೆ ಹೆಚ್ಚಾಯಿತು. **ಬಯಾಪ್ಸಿ** ಮಾಡಿದರೆ ಕ್ಯಾನ್ಸರ್ ಹರಡುತ್ತದೆ.“ಗಡ್ಡೆ ಕೆದಕಿದರೆ ಅದು ಓಡುತ್ತದೆ. ಇಂತಹ ಮಾತುಗಳನ್ನು ನಾವು ತುಂಬಾ ಕೇಳುತ್ತೇವೆ. ಕೆಲವರು ಪರೀಕ್ಷೆಯನ್ನೇ ಭಯಪಡುತ್ತಾರೆ. ಕೆಲವರು ಚಿಕಿತ್ಸೆ ತಡಮಾಡುತ್ತಾರೆ. ಇನ್ನೂ ಕೆಲವರು ಕ್ಯಾನ್ಸರ್ ಅನ್ನು ಮುಟ್ಟಬಾರದು ಎಂದು ನಂಬುತ್ತಾರೆ.
ಆದರೆ ನಿಜ ಏನು ಗೊತ್ತೇ? ವೈದ್ಯಕೀಯ ವಿಜ್ಞಾನ ಹೇಳುವುದು ಕೆಲವೊಮ್ಮೆ ಚಿಕಿತ್ಸೆ ನಂತರ ರೋಗ ಹೆಚ್ಚಾದಂತೆ ಕಾಣಬಹುದು. ಆದರೆ ಬಹಳ ಸಂದರ್ಭಗಳಲ್ಲಿ ಕ್ಯಾನ್ಸರ್ ಈಗಾಗಲೇ ದೇಹದೊಳಗೆ ಕಣ್ಣಿಗೆ ಕಾಣದಷ್ಟು ಸಣ್ಣ ಮಟ್ಟದಲ್ಲಿ ಹರಡಿರಬಹುದು.

### ಮೊದಲು — ಬಯಾಪ್ಸಿ ಅಂದರೆ ಏನು?

ಸರಳವಾಗಿ ಹೇಳುವುದಾದರೆ ಗಡ್ಡೆಯಿಂದ ಸಣ್ಣ ಅಂಗಾಂಶ ತುಂಡನ್ನು ತೆಗೆದು ಪರೀಕ್ಷಿಸುವುದು. ಕ್ಯಾನ್ಸರ್ ಇದೆಯೇ? ಇದ್ದರೆ ಯಾವ ವಿಧದ್ದು? ಯಾವ ಚಿಕಿತ್ಸೆ ಬೇಕು? ಇವೆಲ್ಲ ತಿಳಿಯಲು **ಬಯಾಪ್ಸಿ** ಬಹಳ ಮುಖ್ಯ. ಯಾಕೆಂದರೆ ಸ್ಕ್ಯಾನ್ ಮಾತ್ರ ನೋಡಿ ಪ್ರತಿಯೊಂದು ಗಡ್ಡೆಯೂ ಕ್ಯಾನ್ಸರ್ ಎಂದು ಹೇಳಲು ಸಾಧ್ಯವಿಲ್ಲ. ಕೆಲವು ಸೋಂಕುಗಳು ಕೂಡ ಕ್ಯಾನ್ಸರ್ ಹಾಗೆ ಕಾಣಬಹುದು. ಕೆಲ ಅಪಾಯವಲ್ಲದ ಗಡ್ಡೆಗಳು ಕೂಡ ಭಯ ಹುಟ್ಟಿಸಬಹುದು. ಹೀಗಾಗಿ ಕ್ಯಾನ್ಸರ್ ಚಿಕಿತ್ಸೆಯ ಅಡಿಪಾಯವೇ ಬಯಾಪ್ಸಿ. ಹಾಗಾದರೆ **ಬಯಾಪ್ಸಿ** ಸಮಯದಲ್ಲಿ ಕ್ಯಾನ್ಸರ್ ಕೋಶ ಹೊರಬರುವುದಿಲ್ಲವೇ? ಹೊರಬರಬಹುದು. ಸೂಜಿ ಒಳಗೆ ಹೋಗುವಾಗ ಕೆಲವು ಕ್ಯಾನ್ಸರ್ ಜೀವಕೋಶಗಳು ಹೊರಬರುವ ಸಾಧ್ಯತೆ ಇದೆ.




ಆದರೆ ಇಲ್ಲಿ ಅತ್ಯಂತ ಮುಖ್ಯವಾದ ವಿಷಯ ಏನು ಗೊತ್ತೇ? ಹೊರಬಂದ ಪ್ರತಿಯೊಂದು ಕ್ಯಾನ್ಸರ್ ಕೋಶ ಹೊಸ ಕ್ಯಾನ್ಸರ್ ಆಗುವುದಿಲ್ಲ. ಯಾಕೆ ಗೊತ್ತೇ? ದೇಹದೊಳಗೆ ಬದುಕುವುದು ಸುಲಭವಲ್ಲ. ಒಂದು ಕ್ಯಾನ್ಸರ್ ಕೋಶ ರಕ್ತದಲ್ಲಿ ಬದುಕಬೇಕು. ದೇಹದ ರಕ್ಷಣಾ ವ್ಯವಸ್ಥೆಯಿಂದ ತಪ್ಪಿಸಿಕೊಳ್ಳಬೇಕು. ಹೊಸ ಜಾಗದಲ್ಲಿ ಅಂಟಿಕೊಳ್ಳಬೇಕು. ಅಲ್ಲಿ ಬೆಳೆಯಲು ರಕ್ತಪೂರೈಕೆ ಪಡೆಯಬೇಕು. ಈ ಎಲ್ಲ ಹಂತಗಳನ್ನು ದಾಟಿದಾಗ ಮಾತ್ರ ಹೊಸ ಗಡ್ಡೆ ಬೆಳೆಯುತ್ತದೆ. ಅಂದರೆ ಹೊರಬಂದ ಬಹಳಷ್ಟು ಕ್ಯಾನ್ಸರ್ ಕೋಶ ದೇಹದಲ್ಲೇ ನಾಶವಾಗುತ್ತವೆ.

### ಬಯಾಪ್ಸಿ ಮಾಡಿದರೆ ಕ್ಯಾನ್ಸರ್ ಹೆಚ್ಚುತ್ತದೆಯೇ?

ಇಲ್ಲಿಯೇ ದೊಡ್ಡ ಗೊಂದಲ ಇದೆ. ಬಹಳ ಸಂದರ್ಭಗಳಲ್ಲಿ ಕ್ಯಾನ್ಸರ್ ಈಗಾಗಲೇ ಬೆಳೆಯುತ್ತಿರಬಹುದು.
ಅಥವಾ ದೇಹದೊಳಗೆ ಸಣ್ಣ ಮಟ್ಟದಲ್ಲಿ ಹರಡಿರಬಹುದು. ಬಯಾಪ್ಸಿ ನಂತರ ಅದು ಸ್ಕ್ಯಾನ್‌ನಲ್ಲಿ ಅಥವಾ ಲಕ್ಷಣಗಳಲ್ಲಿ ಕಾಣಿಸಿಕೊಳ್ಳಬಹುದು, ಆಗ ಜನರಿಗೆ“ಬಯಾಪ್ಸಿ ಮಾಡಿದ ಮೇಲೆ ಕ್ಯಾನ್ಸರ್ ಹರಡಿತು” ಎಂದು ಅನಿಸಬಹುದು. ಆದರೆ ಅದೇ ಬಯಾಪ್ಸಿ ಕಾರಣ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

### ಕ್ಯಾನ್ಸರ್ ಹೇಗೆ ಹರಡುತ್ತದೆ?


ಕ್ಯಾನ್ಸರ್ ಸಾಮಾನ್ಯವಾಗಿ ರಕ್ತದ ಮೂಲಕ ಅಥವಾ ದೇಹದ ನಾಳಗಳ ಮೂಲಕ ಹತ್ತಿರದ ಅಂಗಾಂಗಗಳಿಗೆ ಹರಡುತ್ತದೆ. ಇದನ್ನೇ ಮೆಟಾಸ್ಟಾಸಿಸ್ ಎಂದು ಕರೆಯುತ್ತಾರೆ. ಕ್ಯಾನ್ಸರ್ ನಿಂದಾಗುವ ಹೆಚ್ಚಿನ ಸಾವುಗಳಿಗೆ ಮುಖ್ಯ ಕಾರಣವೂ ಇದೇ. ಹಾಗಾದರೆ "ಸೂಜಿ–ಟ್ರ್ಯಾಕ್ ಹರಡುವಿಕೆ" ಎನ್ನುವುದು ಇಲ್ಲವೇ? ಇದೆ. ಆದರೆ ಅದು ಅತ್ಯಂತ ಅಪರೂಪ. ಕೆಲ ಅಪರೂಪದ ಕ್ಯಾನ್ಸರ್ ಗಳಲ್ಲಿ ಸೂಜಿ ಹಾದಿಯಲ್ಲೇ ಕೆಲವು ಕ್ಯಾನ್ಸರ್ ಕೋಶ ಬೆಳೆಯುವ ಘಟನೆಗಳು ವರದಿಯಾಗಿವೆ.
ಆದರೆ ಆಧುನಿಕ ಬಯಾಪ್ಸಿ ತಂತ್ರಗಳಲ್ಲಿ ಈ ಅಪಾಯ ತುಂಬಾ ಕಡಿಮೆ. ವೈದ್ಯರು ಬಯಾಪ್ಸಿ ಮಾಡುವಾಗ ಯಾವ ದಾರಿಯಿಂದ ಹೋಗಬೇಕು? ಎಷ್ಟು ಅಂಗಾಂಶ ತೆಗೆದುಕೊಳ್ಳಬೇಕು? ಮುಂದಿನ ಚಿಕಿತ್ಸೆ ಹೇಗಿರುತ್ತದೆ?ಎಂಬುದನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಯೋಜಿಸುತ್ತಾರೆ.




### ಹಾಗಾದರೆ ವೈದ್ಯರು ಯಾಕೆ ಬಯಾಪ್ಸಿಗೆ ಇಷ್ಟು ಮಹತ್ವ ಕೊಡುತ್ತಾರೆ?

ಒಂದು ಸರಳ ಪ್ರಶ್ನೆ ಕೇಳಿ ನೋಡಿ–ಬಯಾಪ್ಸಿ ನಿಜವಾಗಿಯೂ ಸಾಮಾನ್ಯವಾಗಿ ಕ್ಯಾನ್ಸರ್ ಹರಡಿಸುತ್ತಿದ್ದರೆ. ಪ್ರಪಂಚದ ಎಲ್ಲಾ ದೊಡ್ಡ ಕ್ಯಾನ್ಸರ್ ಕೇಂದ್ರಗಳು ಪ್ರತಿದಿನ ಸಾವಿರಾರು ಬಯಾಪ್ಸಿಗಳು ಯಾಕೆ ಮಾಡುತ್ತವೆ? ಯಾಕೆಂದರೆ ಬಯಾಪ್ಸಿ ಮಾಡುವ ಲಾಭ ಅದರ ಅಪಾಯಕ್ಕಿಂತ ಬಹಳ ದೊಡ್ಡದು. ಸರಿಯಾದ ರೋಗನಿರ್ಣಯ ಇಲ್ಲದೇ ತಪ್ಪು ಚಿಕಿತ್ಸೆ ಆಗಬಹುದು, ಅಗತ್ಯವಿಲ್ಲದ ಶಸ್ತ್ರಚಿಕಿತ್ಸೆ ಆಗಬಹುದು ಅಥವಾ ಸರಿಯಾದ ಚಿಕಿತ್ಸೆ ತಡವಾಗಬಹುದು.

### ಬಯಾಪ್ಸಿ ಮತ್ತು ದೊಡ್ಡ ಶಸ್ತ್ರಚಿಕಿತ್ಸೆ/ ಆಪರೇಷನ್ ಒಂದೇನಾ?




ಇಲ್ಲ. ಬಯಾಪ್ಸಿ ಸಣ್ಣ ಸೂಜಿ ಪರೀಕ್ಷೆ. ಆದರೆ ದೊಡ್ಡ ಆಪರೇಷನ್ ನಲ್ಲಿ: ಹೆಚ್ಚು ಅಂಗಾಂಶ ಸಂಸ್ಕರಣೆ ಹೆಚ್ಚು ಉರಿಯೂತ ಹೆಚ್ಚು ದೇಹದ ಪ್ರತಿಕ್ರಿಯೆ ಉಂಟಾಗಬಹುದು. ಆದ್ದರಿಂದ ಎರಡನ್ನೂ ಒಂದೇ ರೀತಿಯಾಗಿ ನೋಡಲು ಸಾಧ್ಯವಿಲ್ಲ. ಕ್ಯಾನ್ಸರ್ ವಿಜ್ಞಾನದಲ್ಲಿರುವ ಮತ್ತೊಂದು ವಿಚಿತ್ರ ವಿಷಯ. ಕೆಲ ಸಂದರ್ಭಗಳಲ್ಲಿ ದೇಹದೊಳಗೆ ಈಗಾಗಲೇ ಮೌನವಾಗಿ ಇದ್ದ ಚಿಕ್ಕ ಕ್ಯಾನ್ಸರ್ ಜೀವಕೋಶಗಳು ನಂತರ ಬೆಳೆಯುತ್ತಿರುವುದು ಕಂಡುಬರಬಹುದು. ಕೆಲ ವಿಜ್ಞಾನಿಗಳು ದೇಹದ ಉರಿಯೂತ, ಗಾಯ ಗುಣವಾಗುವ ಕ್ರಿಯೆ, ದೇಹದ ರಕ್ಷಣಾ ವ್ಯವಸ್ಥೆಯ ಬದಲಾವಣೆಗಳು, ಇವುಗಳ ಪಾತ್ರವನ್ನು ಅಧ್ಯಯನ ಮಾಡುತ್ತಿದ್ದಾರೆ. ಅಂದರೆ **ಕ್ಯಾನ್ಸರ್ ಬಯಾಪ್ಸಿ** ನಮ್ಮ ಕಲ್ಪನೆಗಿಂತ ಬಹಳ ಸಂಕೀರ್ಣವಾಗಿದೆ.

### ಹಾಗಾದರೆ ಬಯಾಪ್ಸಿ ಮಾಡಿಸಬಾರದೇ?

ಇಲ್ಲ. ಭಯದಿಂದ ಬಯಾಪ್ಸಿ ತಡಮಾಡುವುದರಿಂದ ಕ್ಯಾನ್ಸರ್ ದೊಡ್ಡದಾಗಬಹುದು ಚಿಕಿತ್ಸೆ ಕಷ್ಟವಾಗಬಹುದು. ಗುಣಪಡಿಸಬಹುದಾದ ಹಂತ, ಮುಂದುವರಿದ ಹಂತ ಆಗಬಹುದು ಕೆಲವೊಮ್ಮೆ ಬಯಾಪ್ಸಿ ಭಯವೇ ಕ್ಯಾನ್ಸರ್ ಗಿಂತ ಅಪಾಯಕಾರಿ.

### ಕೊನೆಯ ಮಾತು

ಬಯಾಪ್ಸಿ ಸಮಯದಲ್ಲಿ ಕೆಲವು ಕ್ಯಾನ್ಸರ್ ಜೀವಕೋಶಗಳು ಹೊರಬರಬಹುದು. ಆದರೆ “ಬಯಾಪ್ಸಿ ಮಾಡಿದರೆ ಕ್ಯಾನ್ಸರ್ ಹೆಚ್ಚುತ್ತದೆ” ಎನ್ನುವುದು ಸಾಮಾನ್ಯ ಸತ್ಯವಲ್ಲ. ಬಹಳ ಸಂದರ್ಭಗಳಲ್ಲಿ ಕ್ಯಾನ್ಸರ್ ಈಗಾಗಲೇ ದೇಹದೊಳಗೆ ಹರಡಿರಬಹುದು. ಬಹುಶಃ ನಾವು ಕೇಳಬೇಕಾದ ಪ್ರಶ್ನೆ:

**ಬಯಾಪ್ಸಿ ಮಾಡಿದರೆ ಕ್ಯಾನ್ಸರ್ ಹರಡುತ್ತದೆಯೇ?**
ಇಲ್ಲ, ಸರಿಯಾದ ರೋಗನಿರ್ಣಯ ತಡವಾದರೆ ಏನಾಗುತ್ತದೆ? ಎಂಬುದು. ಒಂದು ಸಾಲಿನಲ್ಲಿ ಹೇಳುವುದಾದರೆ

**ಬಯಾಪ್ಸಿ ಕ್ಯಾನ್ಸರ್ ಹೆಚ್ಚಿಸುವುದಕ್ಕಿಂತ, ಬಯಾಪ್ಸಿ ಭಯವೇ ಹೆಚ್ಚು ಅಪಾಯಕಾರಿ.**